**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.1145/2025**

**CW- 1** **PW:1**

| | |
|---|---|
| ಸಾಕ್ಷಿಯ ಹೆಸರು | ಃ ಚಂದ್ರಗೌಡ ಹಳೇಮನಿ |
| ತಂದೆ /ಗಂಡನ ಹೆಸರು | ಃ ದ್ಯಾಮನಗೌಡ |
| ವಯಸ್ಸು | ಃ 53 ವರ್ಷ |
| ಉದ್ಯೋಗ | ಃ ಎ ಎಸ್ ಐ ನವನಗರ ಎಪಿಎಂಸಿ ಪೊಲೀಸ್ ಠಾಣೆ |
| ವಾಸಸ್ಥಳ | ಃ ಹುಬ್ಬಳ್ಳಿ |

ದಿಃ **20.02.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಕಳೇದ ಮೂರುವರೆ ವರ್ಷಗಳಿಂದ ಎ ಪಿ ಎಂ ಸಿ ನವನಗರ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 14.06.2025 ರಂದು ನನ್ನನ್ನು ಬೆಳಿಗ್ಗೆ 8 ಗಂಟೆಯಿಂದ ಮದ್ಯಾಹ್ನ 2 ಗಂಟೆಯವರೆಗೂ ಪೆಟ್ರೋಲಿಂಗ ಕರ್ತವ್ಯ ಇತ್ತು. ನನ್ನ ಸಂಗಡ ಅಪರಾಧ ವಿಬಾಗ ಸಿಬ್ಬಂದಿಯಾದ ಚಾಸಾಃ 4 ಮತ್ತು 5 ರವರು ಇದ್ದರು. ಪೆಟ್ರೋಲಿಂಗ ಮಾಡುತ್ತಾ ಗಾಮನಗಟ್ಟಿ ಹಾಗೂ ಗಾಮನಗಟ್ಟಿ ಕೈಗಾರಿಕಾ ಪ್ರದೇಶಕ್ಕೆ ಹೋಗುವಾಗ ಗಾಮನಗಟ್ಟಿ ಇಂಡಸ್ಟ್ರಿಯಲ್ ಪ್ರದೇಶದ ಚೋಟಾ ದಾಬಾದ ಹತ್ತಿರ ಒಬ್ಬ ವ್ಯಕ್ತಿ ಆತನೇ ಆರೋಪಿ ತನ್ನ ಹತ್ತಿರ ಬಿಳಿ ಪ್ಲಾಸ್ಟಿಕ ಚೀಲದಲ್ಲಿ ಮದ್ಯ ತುಂಬಿದ ಪ್ಯಾಕೇಟಗಳನ್ನು ಅನಧೀಕೃತವಾಗಿ ಪಾಸ್ ವ ಪರ್ಮಿಟ್ ಇಲ್ಲದೇ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುತ್ತಾನೆ ಅಂತಾ ಖಚಿತ ಮಾಹಿತಿ ಬಂದಿತ್ತು. ನಂತರ ನಾನು ನನ್ನ ಠಾಣೆಯ ಪಿ ಎಸ್ ಐ ಚಾಸಾಃ 8 ರವರಿಗೆ ದೂರನ್ನು ನೀಡಿದೆ ಹಾಗೂ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿದೆ. ನಾನು ನೀಡಿದ ದೂರಿನ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.1 ಎಂದು, ನನ್ನ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

2. ಚಾಸಾಃ 8 ರವರು ನನ್ನನ್ನು ಹಾಗೂ ಅಪರಾಧ ವಿಬಾಗದ ಸಿಬ್ಬಂದಿ ದಾಳಿ ಕುರಿತು ರೇಡ್ ಪಂಚನಾಮೆಗೆ ಹೋಗುವಾಗ ಚಾಸಾಃ 8 ರವರು ಇಬ್ಬರು ಪಂಚರನ್ನು ಕರೆಸಿದರು. ಚಾಸಾಃ 2 ಮತ್ತು 3 ರವರನ್ನು ಕರೆದುಕೊಂಡು ನಮ್ಮ ನಮ್ಮ ವಾಹನದಲ್ಲಿ ಹೋದೆವು. ಮದ್ಯಾಹ್ನ ಗಂಟೆಗೆ ಠಾಣೆ ಬಿಟ್ಟೆವು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.